ಬಂದದ್ದು ಹಬ್ಬ. ಆದರೆ, ಅಪ್ಪ ಮತ್ತು ಮನೆಯವರನ್ನು ಊರಿಗೆ ಕಳಿಸುವ ಗಡಿಬಿಡಿಯಲ್ಲಿದ್ದರು. ನಮಗೆ ಸ್ವಲ್ಪ ಹೊತ್ತು ಮನೆಯಲ್ಲಿಯೇ ಕೂಡಲು ಹೇಳಿ, ಟಾಂಗಾದವನನ್ನು ಕರೆದು ಗಂಟು ಹೇರಿಸಿದರು. ತಾವೂ ಟಾಂಗಾದಲ್ಲಿ ಹೋದರು. ಆ ದಿನಗಳಲ್ಲಿ ಧಾರವಾಡದಲ್ಲಿ ರಿಕ್ಷಾಗಳಿರಲಿಲ್ಲ.

ಮುಂದೆ ಸ್ವಲ್ಪ ಹೊತ್ತಿನಲ್ಲಿಯೇ ಅದೇ ಟಾಂಗಾದಲ್ಲಿ ಮರಳಿದ ಶಾಂತಿನಾಥರು, "ಈಗ ಫ್ರೀ ಬರ್ಡ್ ಆದೆ. ಹೇಳು, ಯಾವಾಗ ಬಂದಿ?" ಎಂದು ಸುಮತಿಯ ಸಲುವಾಗಿ ಚಾ ಮಾಡತೊಡಗಿದರು. ಮನೆ ತುಂಬ ನಾವೇ. "ಊಟಕ್ಕೆ ನಮ್ಮ ಮನೆಗೇ ಹೋಗೋಣ" ಅಂದೆ. ಹರಟೆ ಹೊಡೆಯುತ್ತ, "ಇನ್ನು ಎರಡು ದಿನ ನಮ್ಮಲ್ಲಿಯೇ ಊಟ" ಅಂದೆ. ಶಾಂತಿನಾಥರಿಗೂ ಖುಶಿ. ಮಧ್ಯಾಹ್ನದ ಊಟದ ಅನಂತರ ಮತ್ತೆ ಅವರ ಮನೆಗೆ. ನಾವು ಸಂಜೆಯ ಚಾ ಕುಡಿಯುವ ಸನ್ನಾಹದಲ್ಲಿದ್ದಾಗಲೇ, ಗೌರೀಶ ಕಾಯ್ಕಿಣಿಯವರು ಬಂದುಬಿಟ್ಟರು. ಶಾಂತಿನಾಥರಿಗೆ ಗೊಂದಲ, ದಿಗಿಲು. "ಗೌರೀಶರು ನಮ್ಮಲ್ಲಿ ಮಾತ್ರ ಉಣ್ಣುವುದು. ಬೇರೆ ಕಡೆ ಉಣ್ಣುವುದಿಲ್ಲ. ಮನೆಯಲ್ಲಿ ಬೇರೆ ಯಾರೂ ಇಲ್ಲ..." ಅಂದರು. ಸುಮತಿ ಊಟಪ್ರವೀಣ, ಜೊತೆಗೆ ಪಾಕಪ್ರವೀಣನೂ ಆಗಿದ್ದ. ಅಂದು ರಾತ್ರಿ ಶಾಂತಿನಾಥರ ಮನೆಯಲ್ಲಿ 'ನಾವು ಮೂವರೂ' ಕೂಡಿ ಅಡುಗೆ ಮಾಡಿದೆವು; ಗೌರೀಶರು 'ಶಾಂತಿನಾಥರು ಮಾಡಿದ್ದ ಅಡುಗೆ ಉಂಡು ತೃಪ್ತಿ ವ್ಯಕ್ತಪಡಿಸಿದರು.' ಶಾಂತಿನಾಥರು ನಮ್ಮತ್ತ ನೋಡುತ್ತ ಮುಗುಳುನಕ್ಕರು.

ದೇಸಾಯರು ಮತ್ತು ನಾನು ಒಮ್ಮೆ ಬೆಂಗಳೂರಿನಲ್ಲಿ ಆನಂದರಾವ್ ಸರ್ಕಲ್ಲಿನ ಒಂದು ಲಾಜಿಂಗ್‌ದಲ್ಲಿ ತಂಗಿದ್ದೆವು. ಅವರು ತಮ್ಮ ಸಂಬಂಧಿಕರಾದ ಗುಂಜಾಳ ವಕೀಲರ ಜಯನಗರದ ಮನೆಯಲ್ಲಿ ಉಳಿಯುವುದಕ್ಕಿಂತ ಇಲ್ಲಿ ಉಳಿಯುವುದನ್ನು ಇಷ್ಟಪಡುತ್ತಿದ್ದರು. ಆ ರಾತ್ರಿ ನನ್ನ ರೂಮಿಗೇ ಬಂದು ಕುಳಿತರು. ನಾವಿಬ್ಬರೂ ಬಹಳಷ್ಟು ಮಾತಾಡಿದೆವು. ಮೊದಲಿನಿಂದಲೂ ನಮ್ಮ ಸಂಬಂಧದಲ್ಲಿ ಮುಚ್ಚು–ಮರೆ ಇರಲೇ ಇಲ್ಲ. ಬೆಂಗಳೂರಿನಲ್ಲಿಯೇ ಘಟಿಸಿದ್ದ ಒಂದು ಸತ್ಯ ಸಂಗತಿಯನ್ನು ಅಂದು ಹೇಳಿದರು. "ಬಹಳ ಕಾಲದಿಂದ ಈ ಸತ್ಯವನ್ನು ಬಹಿರಂಗಗೊಳಿಸಲು ಕಾಯುತ್ತಿದ್ದೆ, ಇಂದು ನಿಮಗೆ ಹೇಳಿ 'ಮುಕ್ತಿ' ಪಡೆದಿದ್ದೇನೆ," ಅಂದರು. ಅವರ ಬಹುಪಾಲು ಕಥೆಗಳು ಮುಕ್ತಿಯ ಮಹಾದ್ವಾರಗಳೇ ಆಗಿದ್ದವು. "ನನಗೆ ಈಗ ಹೇಳಿದ ಈ ಪ್ರಸಂಗವನ್ನೂ ನೀವು ಬಳಸಿಕೊಳ್ಳಬೇಕು, ಬರೆಯಬೇಕು, ಇಲ್ಲವಾದರೆ ಅದು ನಿಮ್ಮನ್ನು ಒಳಗಿಂದೊಳಗೇ ಕೊರೆಯುತ್ತಿರುತ್ತದೆ," ಅಂದೆ. "ಅದನ್ನು ಮರೆಯುವುದು ತೊರೆಯುವುದು ಬರೆಯುವುದು ಸಾಧ್ಯವಿಲ್ಲ; ಯಾಕಂದರೆ ಆ ಹೊತ್ತಿನಲ್ಲಿ ಇನ್ನೊಂದು ಪಕ್ಷ ನನ್ನ ಜೊತೆಗೆ ನಡೆದುಕೊಂಡದ್ದನ್ನು, ತೋಡಿಕೊಂಡದ್ದನ್ನು, ಬೇಡಿಕೊಂಡದ್ದನ್ನು ಯಾವ ಭಾಷೆಯ ಅಕ್ಷರಗಳೂ ವಿವರಿಸಲಾರವು, ಬರೆಯಲಾರವು..." ಎನ್ನುತ್ತ ಚಾಳೀಸಿನ ತೊಯ್ಯುತ್ತಿದ್ದ ದಪ್ಪ ಗ್ಲಾಸ್ ಒರೆಸಿಕೊಂಡರು. ಅವರ ಮಾತು ಸತ್ಯ. ಪ್ರತಿಯೊಬ್ಬ ಪ್ರಾಮಾಣಿಕ ಬರಹಗಾರ ಅಂಥ ಕಠೋರ ಸತ್ಯವನ್ನು, ಒಳಈಟಿ ಇರಿತವನ್ನು ಸಹಿಸುತ್ತಲೇ, ಸಂಕಟಪಡುತ್ತಲೇ ಇರುತ್ತಾನೆ. ಶಾಂತಿನಾಥರು ಅಗ್ನಿಕುಂಡದಲ್ಲಿ ಬೇಯುತ್ತಿದ್ದರು. 'ಮುಕ್ತಿ' ರಚಿಸಿ ಇಷ್ಟು ಕಾಲ ಕಳೆದ ಅನಂತರ ಅಕ್ಷರಶಃ ಇಬ್ಬರೂ 'ಮುಕ್ತಿ' ಪಡೆದಿದ್ದರು; ಆದರೆ ಬೇರೆ ನವಬಂಧನದಲ್ಲಿ, ಹೊಸ ಇರುಕಿನ ಇಕ್ಕಟ್ಟಿನಲ್ಲಿ ಸಿಲುಕಿಕೊಂಡಿದ್ದರು. ಅವರ ಕಥಾಸಾಹಿತ್ಯದ ವಾಸ್ತವಗಳನ್ನು ಓದಿ ಕಲ್ಪಿಸಿದವರಿಗೆ ಇದು ಅರ್ಥವಾಗುತ್ತದೆ.

ದೇಸಾಯರು ಕೊಲ್ಹಾಪುರದಲ್ಲಿ ಸಂಬಂಧ ಮಾಡಿಕೊಂಡಿದ್ದು ಒಂದು ರೀತಿಯಿಂದ ಅವರ ಬರವಣಿಗೆಗೆ, ಅನುಕೂಲಕರವಾದುದೇ ಆಗಿತ್ತು. ಅವರ ಕಥೆ, ಕಾದಂಬರಿಗಳ ಯಾವ ಪಾತ್ರಗಳ ಅಂತರಂಗವನ್ನೂ ಕೊಲ್ಹಾಪುರದ ಕನ್ನಡ ಮೂಲದ ಜೈನ ಮನೆತನ ಅರ್ಥ ಮಾಡಿಕೊಳ್ಳುವುದು ಕಷ್ಟಕರವಾಗಿತ್ತು; ಆದರೆ ಅದು ಶಾಂತಿನಾಥರಿಗೆ ಸಿಕ್ಕ ಪರೋಕ್ಷ ವರದಾನವಾಗಿತ್ತು. ಬರೆದಾದ ಅನಂತರ ಮನೆಯಲ್ಲಿ ಅವರು ಮರಾಠಿಯಲ್ಲಿ ಸಾರಾಂಶ ನಿರೂಪಿಸಬೇಕಾಗುತ್ತಿತ್ತು,